ನನ್ನ ಪೂರ್ವಜರ ದೇಶ ಭಾರತಕ್ಕೆ ಹೋಗಬೇಕೆಂದು ಮನಸ್ಸು ಮೊದಲಿಂದಲೂ ತುಡಿಯುತ್ತಿತ್ತು. ನನ್ನ ಸೋದರಿ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಚೆನ್ನಾಗಿ ಹಣ ಮಾಡಿದ್ದಳು. ಅವಳು ನನ್ನ ಪ್ರವಾಸಕ್ಕೆ ಟಿಕೇಟು ತೆಗೆಸಿಕೊಟ್ಟಳು. ಲಂಡನ್, ಇಟಲಿ, ಬೈರೂತ್, ಟೆಹರಾನ್, ದೆಹಲಿ – ಐದು ಸ್ಥಳಗಳಿಗೆ ಹೋಗುವ ಟಿಕೇಟದು. ಭಾರತಕ್ಕೆ 1971ರಲ್ಲಿ ಬಂದಿಳಿದಾಗ, ಬಾಂಗ್ಲಾ ವಿಮೋಚನೆಗಾಗಿ ಪಾಕಿಸ್ತಾನದ ಜೊತೆ ಯುದ್ಧ ನಡೆಯುತ್ತಿತ್ತು. ಯುದ್ಧಭೂಮಿಯಲ್ಲಿ ಫೋಟೊ ತೆಗೆಯಲು ಸಿದ್ಧನಾದೆ. ಅಲ್ಲಿ ಜಗತ್ತಿನ ಶ್ರೇಷ್ಠ ಫೋಟೊಗ್ರಾಫರ್ ರಘುರಾಯ್ ಅವರ ಪರಿಚಯ ಆಯಿತು. ನಾನು ಅವರನ್ನೇ ಫಾಲೊ ಮಾಡುತ್ತಿದ್ದೆ. ಅವರು ಕೆಲಸ ಮಾಡುವ ರೀತಿಯನ್ನು ಗಮನಿಸುತ್ತಿದ್ದೆ. ಅದೊಂದು ಅದ್ಭುತ ಅನುಭವ.

### ◆ ರಘುರಾಯ್ ಯಾಕೆ ಮುಖ್ಯ?

ನಾವು ಪತ್ರಿಕೆಯಲ್ಲಿ ನಮ್ಮ ಪಟಕ್ಕೆ ಸಿಗುವ ಜಾಗವನ್ನು ಲೆಕ್ಕಹಾಕಿ ತೆಗೆಯುತ್ತೇವೆ. ಆದರೆ, ರಘುರಾಯ್ ಪಟಗಳ ಚೌಕಟ್ಟು ವ್ಯಾಪಕ. ಒಂದು ಜಾತ್ರೆಯ ಪಟವಾದರೆ, ಅದರಲ್ಲಿ ತಂದೆ–ತಾಯಿ ಕೂತಿರುತ್ತಾರೆ. ತುಸು ದೂರದಲ್ಲಿ ಮಗು ಕೈಲಿ ಬಲೂನು ಹಿಡಿದು ನಿಂತಿರುತ್ತದೆ, ಇನ್ನೊಂದು ಮಗು ಕೋಳಿಗಳ ಜತೆ ಆಡುವಾಡುತ್ತಿರುತ್ತದೆ – ಹೀಗೆ ಎಲ್ಲವೂ ಅಲ್ಲಿರುತ್ತದೆ. ಅವು ನಿಜವಾದ ಕಲಾಕೃತಿಗಳು. ಹೋಲಿ–ದೀಪಾವಳಿ ಥೀಮ್ ಕುರಿತ ಚಿತ್ರಪಟಗಳ ಆಲ್ಬಂ ಪ್ರಕಟವಾಗಿವೆ. ಪಟವನ್ನು ಯಾರಾದರೂ ತೆಗೆಯಬಹುದು. ದೃಷ್ಟಿಕೋನ ಮುಖ್ಯ. ಶಿವಶಂಕರ ಬಣಗಾರ ಅವರ ಹಂಪಿ ಪಟಗಳನ್ನು ಗಮನಿಸಿ. ಅಲ್ಲಿ ಕೇವಲ ಬೆಳಕಿನ ವಿನ್ಯಾಸವಿಲ್ಲ. ಒಂದು ಚಿಂತನೆಯೂ ಇದೆ.



ಕಲ್ಲಿದ್ದಲು ಅಂಗಡಿಯ ಕಾರ್ಮಿಕ; ವಾರಾಣಸಿ

### ◆ ಯುದ್ಧಭೂಮಿಯಲ್ಲಿ ಫೋಟೊ ಜರ್ನಲಿಸ್ಟುಗಳ ಪಾಡು ಹೇಗಿರುತ್ತದೆ?

ಎಲ್ಲವೂ ಅನಿರೀಕ್ಷಿತ. ಏನೂ ಆಗಬಹುದು. ನಾನೊಮ್ಮೆ ದೆಹಲಿಯಿಂದ ಜಲಂಧರ್‌ಗೆ ಹೋದೆ. ಇಡೀ ಟ್ರೈನ್ ಕತ್ತಲಲ್ಲಿ ಚಲಿಸುತ್ತಿತ್ತು. ಬ್ಲಾಕ್‌ಔಟ್ ಘೋಷಿಸಲಾಗಿತ್ತು. ಕತ್ತಲು ತುಂಬಿದ ಜಲಂಧರ್ ಸ್ಟೇಷನ್ನಿನಲ್ಲಿ ಮಲಗಿದೆ. ಯಾರೋ ಒಬ್ಬರು, ಪಾಕಿಸ್ತಾನಿ ಗೂಢಚಾರ ಬಂದಿದ್ದಾನೆಂದು ಪೊಲೀಸರಿಗೆ ವರದಿ ಮಾಡಿದ್ದರು. ಪೊಲೀಸರು ನನ್ನನ್ನು ಹಿಡಿದು ವಿಚಾರಣೆ ನಡೆಸಿದರು. ಕೀನ್ಯಾದವನು ಎಂದು ತಿಳಿದ ಬಳಿಕ ಗೌರವದಿಂದ ಕಂಟೋನ್ಮೆಂಟ್‌ಗೆ ತಂದು ಬಿಟ್ಟರು. ಅಲ್ಲಿ ಯುದ್ಧದ ವರದಿ ಮಾಡಲು ಜಗತ್ತಿನ ಫೋಟೊ ಜರ್ನಲಿಸ್ಟುಗಳು ನೆರೆದಿದ್ದರು. ನಾವಿದ್ದ ಜಾಗದಲ್ಲಿ, ಅಪಾಯ ಬಂದಾಗ ಅಡಗಿಕೊಳ್ಳುವುದಕ್ಕೆ ಟ್ರೆಂಚ್ ಅಗೆಯಲಾಗಿತ್ತು. ರಾತ್ರಿ ಡೈನಿಂಗ್ ಹಾಲಿಗೆ ಕತ್ತಲಲ್ಲಿ ಹೋಗುವಾಗ ಆಳವಾದ ಗುಂಡಿಯಲ್ಲಿ ಬಿದ್ದುಬಿಟ್ಟೆ. 'ಸೇವ್‌ಮಿ ಸೇವ್‌ಮಿ' ಎಂದು ಕೂಗಿದೆ. ನನ್ನ ಗದ್ದಲಕ್ಕೆ ಕ್ಯಾಂಪಿನಲ್ಲಿದ್ದ ವರದಿಗಾರರು, ಪ್ಯಾರಾಶೂಟನಿಂದ ಪಾಕಿಸ್ತಾನದಿಂದ ಯಾರೋ ಬಂದಿರಬಹುದು ಎಂದು ಓಡಿ ಹೋಗಿ ಅಡಗಿಕೊಂಡರು. ಕಡೆಗೆ ಒಬ್ಬ ಸಿಖ್ ನನ್ನನ್ನು ಪತ್ತೆ ಮಾಡಿದ. ಹಗ್ಗ ತಂದು ಮೇಲಕ್ಕೆಳೆದ. (ಬೆರಳಿನಲ್ಲಿದ್ದ ಗಾಯದ ಗುರುತನ್ನು ತೋರಿಸುತ್ತ) ಆಗ ಆದ ಗಾಯವಿದು.

### ◆ ಜಲಂಧರ್‌ನಲ್ಲಿ ಯಾವ ಪಟಗಳನ್ನು ತೆಗೆದಿರಿ?

ಜಲಂಧರ್‌ನಲ್ಲಿ ರಾತ್ರಿ ಮಲಗಿದ್ದಾಗ, ಫೈಟರ್